ಜ.ಶಿ.ವಿ.ವ ಸಂಸ್ಥೆಯ
ಶ್ರೀ ದಾ.ಗು. ಮೇಲ್ಮಾಳಗಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ
ಮತ್ತು ಸ್ನಾತಕೋತ್ತರ ಕೇಂದ್ರ ಗದಗ
(ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಸಂಯೋಜಿತ ಮತ್ತು ಎನ್.ಸಿ.ಐ.ಎಸ್.ಎಂ
ನವದೆಹಲಿಯಿಂದ ಮನ್ನಣೆ ಪಡೆದ)
Dr.S.V.Savadi Road, Shivananda Nagar, GADAG – 582 103,
Tel:- (08372) 238014, Fax: 08372 – 230450,
E-mail: dgmamch@gmail.com Website:www.dgmamcgadag.org.

NO:DGM/AMC/2025-26/212 Date:03-03-2026

## ಅಧಿಸೂಚನೆ

ಕರ್ನಾಟಕ ಸರ್ಕಾರದಿಂದ ಅನುದಾನ ಪಡೆದ ಡಿ.ಜಿ.ಎಂ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಗದಗ ಇಲ್ಲಿ ಖಾಲಿ ಇರುವ 03 ವಿಷಯವಾರು ಬೋಧಕ ವೃಂದದ ಉಪನ್ಯಾಸಕ ಬ್ಯಾಕಲಾಗ್ ಹುದ್ದೆಗಳನ್ನು(02-ಎಸ್.ಸಿ ಮತ್ತು 01-ಎಸ್.ಟಿ) ನೇರ ನೇಮಕಾತಿಗೆ ಮೂಲಕ ಭರ್ತಿ ಮಾಡಿಕೊಳ್ಳಲು ಸಂಖ್ಯೆ:ಡಿಜಿಎಂ/ಎಎಂಸಿ/ಸಿಬ್ಬಂದಿ/2019-20 ದಿನಾಂಕ:23-01-2020ರನ್ವಯ ಹೊರಡಿಸಲಾದ ನೇಮಕಾತಿ ಅಧಿಸೂಚನೆಗೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಮಹಾವಿದ್ಯಾಲಯದ ಸೂಚನಾ ಫಲಕ, ವೆಬ್ ಸೈಟ್ ಮತ್ತು ಆಯುಷ್ ಇಲಾಖೆಯ ಸೂಚನಾ ಫಲಕ, ವೆಬ್ ಸೈಟ್‌ನಲ್ಲಿ ಪ್ರಕಟಿಸಿದ್ದು, ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆ ಇದ್ದಲ್ಲಿ ಲಿಖಿತ ರೂಪದಲ್ಲಿ ದಿನಾಂಕ:03-04-2026ರೊಳಗಾಗಿ ಕಛೇರಿ ಅವಧಿಯಲ್ಲಿ ಖುದ್ದು ಮಹಾವಿದ್ಯಾಲಯದ ಪ್ರಾಚಾರ್ಯರಿಗೆ ಸಲ್ಲಿಸುವಂತೆ ಸೂಚಿಸಿದೆ.

Shivanandswamy

ಅಧ್ಯಕ್ಷರು
ಜಗದ್ಗುರು ಶ್ರೀ ಶಿವಾನಂದ ವಿದ್ಯಾವರ್ಧಕ ಸಂಸ್ಥೆ,
ಡಿ.ಜಿ.ಎಂ ಆಯುರ್ವೇದ ವೈದ್ಯಕೀಯ
ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಗದಗ

ಪ್ರಾಚಾರ್ಯರು
ಡಿ.ಜಿ.ಎಂ ಆಯುರ್ವೇದ ವೈದ್ಯಕೀಯ
ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಗದಗ

ಶ್ರೀ ಜ.ಶಿ.ವಿ.ವ ಸಂಸ್ಥೆಯ
ಶ್ರೀ ದಾ.ಗು. ಮೇಲ್ಮಾಳಗಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸ್ನಾತಕೋತ್ತರ ಕೇಂದ್ರ ಗದಗ
(ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಸಂಯೋಜಿತ ಮತ್ತು ಎನ್.ಸಿ.ಐ.ಎಸ್.ಎಂ ನವದೆಹಲಿಯಿಂದ ಮನ್ನಣೆ ಪಡೆದ)
J.S.V.V.S. SAMSTHE'S
**SHRI D.G.MELMALAGI AYURVEDIC MEDICAL COLLEGE, GADAG.**
Affiliated to Rajiv Gandhi University of Health Sciences. Bangalore
And recognized by NCISM, New Delhi
Dr.S.V.Savadi Road, Shivananda Nagar, GADAG – 582 103,
Tel:- (08372) 238014, Fax: 08372 – 230450,
E-mail: dgmamch@gmail.com Website:www.dgmamcgadag.org.

NO:DGM/AMC/2025-26/ 213 Date:03-03-2026

## ಅಧಿಸೂಚನೆ

ವಿಷಯ: ಡಿ.ಜಿ.ಎಂ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಗದಗ ಇಲ್ಲಿ ಖಾಲಿ ಇರುವ ಬೋಧಕ ವೃಂದದ ಬ್ಯಾಕಲಾಗ್ ಹುದ್ದೆಗಳನ್ನು ನೇರ ನೇಮಕಾತಿಗೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ:1. ಈ ಕಛೇರಿಯ ನೇಮಕಾತಿ ಅಧಿಸೂಚನೆ ಸಂಖ್ಯೆ:ಡಿಜಿಎಂ/ಎಎಂಸಿ/ಸಿಬ್ಬಂದಿ/2019-20 ದಿನಾಂಕ:23-01-2020.
2. ಆಯುಷ್ ನಿರ್ದೇಶನಾಲಯದ ಪತ್ರದ ಸಂಖ್ಯೆ:AYUSH/16/ESTS/2020-ESTS ದಿನಾಂಕ:28-10-2025.
3. ದಿನಾಂಕ:26-11-2025ರಂದು ನಡೆದ ನೇಮಕಾತಿ ಸಮಿತಿ ಸಭಾ ನಡವಳಿಗಳು.

*************

ಉಲ್ಲೇಖಿತ (1)ರನ್ವಯ ಅಧಿಸೂಚನೆಯನ್ವಯ ಡಿ.ಜಿ.ಎಂ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಗದಗ ಇಲ್ಲಿ ಖಾಲಿ ಇರುವ 03 ವಿಷಯವಾರು ಬೋಧಕ ವೃಂದದ ಉಪನ್ಯಾಸಕ ಬ್ಯಾಕಲಾಗ್ ಹುದ್ದೆಗಳ(02-ಎಸ್.ಸಿ ಮತ್ತು 01-ಎಸ್.ಟಿ) ನೇರ ನೇಮಕಾತಿಗೆ ಸಂಬಂಧಿಸಿದಂತೆ ಉಲ್ಲೇಖಿತ(2)ರ ಪತ್ರದಲ್ಲಿ ಸೂಚಿಸಿರುವಂತೆ ನ್ಯೂನ್ಯತೆಗಳನ್ನು ಸರಿಪಡಿಸಿ ಉಲ್ಲೇಖಿತ(3)ರನ್ವಯ ದಿನಾಂಕ:26-11-2025ರಂದು ನಡೆದ ನೇಮಕಾತಿ ಸಮಿತಿ ಸಭೆಯಲ್ಲಿ ತೀರ್ಮಾನಿಸಿದಂತೆ ಎಂ.ಡಿ ಪದವಿಗೆ ಸಂಬಂಧಿಸಿದಂತೆ ಕೆಲವು ಅಭ್ಯರ್ಥಿಗಳು ಗ್ರೇಡಿಂಗ್ ಅಂಕಪಟ್ಟಿಯನ್ನು ಸಲ್ಲಿಸಿದ್ದು, ಗ್ರೇಡಿಂಗ್ ಅಂಕ ಪಟ್ಟಿಯನ್ವಯ ಶೇಕಡಾವಾರು(%) ನಿರ್ಧರಿಸಲು ಆಗದೇ ಇರುವುದರಿಂದ ಮತ್ತು ಗ್ರೇಡಿಂಗ್ ಅಂಕಪಟ್ಟಿ ಸಲ್ಲಿಸಿದ ಅಭ್ಯರ್ಥಿಗಳನ್ನು ನೇಮಕಾತಿ ಪ್ರಕ್ರಿಯೆಯಿಂದ ಕೈಬಿಡುವುದು ನ್ಯಾಯಸಮತವಾಗಿಲ್ಲದೇ ಇರುವುದರಿಂದ ನೇಮಕಾತಿ ಅರ್ಜಿಯಲ್ಲಿ ಕೋರಿದ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿದ ಅರ್ಹ ಅಭ್ಯರ್ಥಿಗಳ ಬಿ.ಎ.ಎಂ.ಎಸ್ ಪ್ರಥಮ ವರ್ಷದಿಂದ ಅಂತಿಮ ವರ್ಷದವರೆಗೆ ಪಡೆದಿರುವ ಅಂಕಗಳನ್ನು ಒಟ್ಟುಗೂಡಿಸಿ ಶೇಕಡಾವಾರು ಹೆಚ್ಚಿರುವ ಹಾಗೂ The Karnataka SCS, STs and OBC's (Reservation of Appointments etc.) Act 1990 ಮತ್ತು The Karnataka State Civil Services (Unfilled Vacancies Reserved for Persons Belonging to the SCs and STS (Special Recruitment) Rules 2001 ನಿಯಮಗಳಲ್ಲಿನ ವಯೋಮಿತಿಗೆ ನಿಬಂಧನೆಯನ್ವಯ ರಸಶಾಸ್ತ್ರ ಮತ್ತು ಭೈಷಜ್ಯ ಕಲ್ಪನ ಹಾಗೂ ಅಗದತಂತ್ರ ವಿಷಯಗಳಿಗೆ ಮಾತ್ರ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗಿದೆ.

ಸದರಿ ತಾತ್ಕಾಲಿಕ ಆಯ್ಕೆಪಟ್ಟಿಗೆ ಆಕ್ಷೇಪಣೆಗಳನ್ನು 30 ದಿನಗಳೊಳಗಾಗಿ ಸೂಕ್ತದಾಖಲೆಗಳೊಂದಿಗೆ ಕಛೇರಿ ಅವಧಿಯಲ್ಲಿ ಪ್ರಾಚಾರ್ಯರಿಗೆ ಖುದ್ದಾಗಿ ಸಲ್ಲಿಸಲು ಸೂಚಿಸಿದೆ. ಅವಧಿ ಮುಕ್ತಾಯವಾದ ನಂತರ ಸ್ವೀಕೃತಗೊಂಡ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಆಯ್ಕೆ ಪಟ್ಟಿಯು ತಾತ್ಕಾಲಿಕವಾಗಿದ್ದು ಅಭ್ಯರ್ಥಿಗಳ ಆಯ್ಕೆಯ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಹಾಗೂ ಪುನರ್ ಪರಿಶೀಲನೆಗೆ ಒಳಪಟ್ಟಿದೆ.

. . . 02

**ಷರತ್ತು ಮತ್ತು ನಿಬಂಧನೆಗಳು:-**

1. ಈ ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಅಭ್ಯರ್ಥಿಗಳ ಹೆಸರನ್ನು ಸೇರಿಸಿರುವ ಕಾರಣದಿಂದಾಗಿಯೇ ಯಾವುದೇ ಅಭ್ಯರ್ಥಿಗೆ ನೇಮಕಾತಿ ಹಕ್ಕು ಪ್ರಾಪ್ತವಾಗುವುದಿಲ್ಲ.
2. ಈ ಆಯ್ಕೆಯು ಸರ್ಕಾರದ ಆದೇಶದನ್ವಯ ಅಭ್ಯರ್ಥಿಗಳು ಸಲ್ಲಿಸಿರುವ ಅಂಕ ಪಟ್ಟಿಗಳು, ಜಾತಿ ಮತ್ತು ಇನ್ನಿತರ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ನೈಜತ ಪರಿಶೀಲನೆಗೆ ಒಳಪಡಿಸಿ ಅವರು ನೀಡಲಾಗುವ ಅಭಿಪ್ರಾಯಕ್ಕೆ ಒಳಪಟ್ಟಿರುತ್ತದೆ. ಯಾವುದೇ ಅಭ್ಯರ್ಥಿಯು ಸಲ್ಲಿಸಿರುವ ಅಂಕಪಟ್ಟಿಗಳ/ಪ್ರಮಾಣ ಪತ್ರಗಳ ನೈಜತೆಯ ಬಗ್ಗೆ ವ್ಯತಿರಿಕ್ತ ವರದಿ ಸ್ವೀಕೃತವಾದಲ್ಲಿ, ಅಂತಹ ಅಭ್ಯರ್ಥಿಯ ಆಯ್ಕೆಯನ್ನು ಯಾವುದೇ ಸೂಚನೆ ನೀಡದಂತೆ ರದ್ದುಗೊಳಿಸಲಾಗುವುದು.
3. ಯಾವುದೇ ಅಭ್ಯರ್ಥಿಯು ಆಯ್ಕೆಗೆ ಅನರ್ಹ ಎಂದು ಕಂಡುಬಂದಲ್ಲಿ, ಆಯ್ಕೆ ಸಮಿತಿಯು ಅಂತಹ ಅಭ್ಯರ್ಥಿಯ ಅರ್ಜಿಯನ್ನು ಪುನರ್ ಪರಿಶೀಲಿಸಿ ತಿರಸ್ಕರಿಸುವ ಹಕ್ಕು ಹೊಂದಿರುತ್ತದೆ.
4. ಸದರಿ ಆಯ್ಕೆಪಟ್ಟಿಯು ನ್ಯಾಯಾಲಯದಲ್ಲಿ ಹೂಡಿರುವ / ಹೂಡುವ ಪ್ರಕರಣಗಳ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ.
5. ಈ ತಾತ್ಕಾಲಿಕ ಆಯ್ಕೆಪಟ್ಟಿಯು ಪುನರ್ ಪರಿಶೀಲನೆಗೆ ಒಳಪಡುವ ಷರತ್ತಿಗೊಳಪಟ್ಟಿರುತ್ತದೆ.
6. ಈ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳು ನಿಗದಿತ ಅವಧಿಯಲ್ಲಿ ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ಅಥವಾ ದಾಖಲಾತಿಗಳು ಅಪೂರ್ಣವೆಂದು ಕಂಡುಬಂದಲ್ಲಿ, ಮೆರಿಟ್ ಆಧಾರದ ಮೇಲೆ ಕಾಯುವಿಕೆಯಲ್ಲಿರುವ ಅಭ್ಯರ್ಥಿಗಳ **"ಹೆಚ್ಚುವರಿ ಆಯ್ಕೆ ಪಟ್ಟಿಯನ್ನು" (Additional/Waitlist)** ತದನಂತರದಲ್ಲಿ ನಿಯಮಾನುಸಾರ ಪ್ರಕಟಿಸಲಾಗುವುದು.

Shivanand Swamy

ಅಧ್ಯಕ್ಷರು
ಜಗದ್ಗುರು ಶ್ರೀ ಶಿವಾನಂದ ವಿದ್ಯಾವರ್ಧಕ ಸಂಸ್ಥೆ,
ಡಿ.ಜಿ.ಎಂ ಆಯುರ್ವೇದ ವೈದ್ಯಕೀಯ
ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಗದಗ

ಪ್ರಾಚಾರ್ಯರು
ಡಿ.ಜಿ.ಎಂ ಆಯುರ್ವೇದ ವೈದ್ಯಕೀಯ
ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಗದಗ

## ದಿನಾಂಕ:26-11-2025 ರಂದು ಬ್ಯಾಕ್ ಲಾಗ್ ಹುದ್ದೆಗಳಿಗೆ ಸ್ವೀಕೃತಿಗೊಂಡ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆಪಟ್ಟಿಯ ಸಭಾ ನಡುವಳಿಗಳು

**ಸಭೆಯಲ್ಲಿ ಹಾಜರಿದ್ದ ನೇಮಕಾತಿ ಸಮಿತಿ ಸದಸ್ಯರು:**

| ಕ್ರ.ಸಂ | ಅಧಿಕಾರಿಗಳ ಹೆಸರು | ಪದನಾಮ |
|---|---|---|
| 01 | ಪರಮಪೂಜ್ಯ ಜಗದ್ಗುರು ಶ್ರೀ. ಅಭಿನವ ಶಿವಾನಂದ ಮಹಾಸ್ವಾಮಿಗಳು, ಶ್ರೀ ಶಿವಾನಂದ ಬೃಹನ್ಮಠ, ಗದಗ. | ಅಧ್ಯಕ್ಷರು |
| 02 | ಉಪನಿರ್ದೇಶಕರು, ಸಮಾಜ ಕಲ್ಯಾಣಾಧಿಕಾರಿಗಳು, ಗದಗ | ಸದಸ್ಯರು |
| 03 | ಶ್ರೀ.ಬಿ.ಎಸ್.ಪಾಟೀಲ, ಆಡಳಿತ ಮಂಡಳಿ ಕಾರ್ಯದರ್ಶಿಗಳು | ಸದಸ್ಯರು |
| 04 | ಡಾ. ಎಸ್.ಎನ್.ಬೆಳವಡಿ | ಸದಸ್ಯ ಕಾರ್ಯದರ್ಶಿಗಳು |
| 05 | ಡಾ. ಎಂ.ವಿ.ಸೊಬಗಿನ | ಸದಸ್ಯರು (ವಿಷಯ ತಜ್ಞರು) |
| 06 | ಡಾ. ಜೆ.ಎಸ್.ಮೆಣಸಗಿ | ಸದಸ್ಯರು (ವಿಷಯ ತಜ್ಞರು) |

*************

ಸಭೆಗೆ ಆಗಮಿಸಿದ್ದ ಸಮಿತಿ ಸದಸ್ಯರುಗಳನ್ನು ಸ್ವಾಗತಿಸುವುದರೊಂದಿಗೆ ಅನುದಾನಿತ ಡಿಜಿಎಂ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಗದಗ ಇಲ್ಲಿಯ ಪರಿಶಿಷ್ಠ ಜಾತಿ ಭೋಧಕ ವೃಂದದ ಹುದ್ದೆ 01 ಮತ್ತು ಪರಿಶಿಷ್ಠ ಪಂಗಡದ ಭೋಧಕ ವೃಂದದ 02 ಹುದ್ದೆಗಳು ಒಟ್ಟು 03 ಬ್ಯಾಕ್‌ಲಾಗ್ ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಯುಷ್ ನಿರ್ದೇಶನಾಲಯದಿಂದ ಪರಿಶೀಲಿಸಿ ಕಳುಹಿಸಲಾದ ನ್ಯೂನ್ಯತೆಗಳ ಕುರಿತು ಚರ್ಚಿಸಲು ಮತ್ತು ಹೊಸದಾಗಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ತಯಾರಿಸುವ ಬಗ್ಗೆ ಸಭೆಯನ್ನು ಪ್ರಾರಂಭಿಸಲಾಯಿತು.

ಆಯುಷ್ ನಿರ್ದೇಶನಾಲಯ ಬೆಂಗಳೂರು ಇವರ ಪತ್ರದ ಸಂಖ್ಯೆ:AYUSH/16/EST5/2020-ESTS ದಿನಾಂಕ:28-10-2025 ರ ಪತ್ರದಲ್ಲಿ ತಿಳಿಸಿರುವಂತೆ ಈಗಾಗಲೇ ಸಲ್ಲಿಸಲಾದ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಈ ಕೆಳಕಂಡ ನ್ಯೂನ್ಯತೆಗಳ ಬಗ್ಗೆ ಸಭೆಯ ಗಮನಕ್ಕೆ ತರಲಾಯಿತು. ಇಲ್ಲಿ ಸದರಿ ಬ್ಯಾಕಲಾಗ್ ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿನ ನ್ಯೂನ್ಯತೆಗಳು ಈ ಕೆಳಕಂಡಂತೆ ಇರುತ್ತದೆ

**ನ್ಯೂನ್ಯತೆ ಸಂಖ್ಯೆ:** 01 ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಬ್ಯಾಕ್‌ಲಾಗ್ ನೇಮಕಾತಿ ಪ್ರಕ್ರಿಯೆಗೆ The Karnataka SCs, STs and OBC's (Reservation of Appointments etc.) Act 1990 ಮತ್ತು The Karnataka State Civil Services (Unfilled Vacancies Reserved for Persons Belonging to the SCs and STs (Special Recruitment) Rules 2001 ನಿಯಮಗಳು ಅನ್ವಯವಾಗುತ್ತಿದ್ದು, ಈ ನಿಯಮಗಳನ್ವಯ ಬ್ಯಾಕ್ ಲಾಗ್ ನೇಮಕಾತಿಯನ್ನು ನಡೆಸಲಾಗುತ್ತದೆ ಎಂಬ ಅಂಶವನ್ನು ಸದರಿ ಸಂಸ್ಥೆಯಿಂದ ನೇಮಕಾತಿಗೆ ಹೊರಡಿಸಿರುವ ಅಧಿಸೂಚನೆ ಜಾಹಿರಾತಿನಲ್ಲಿ ಉಲ್ಲೇಖಿಸಿರುವುದಿಲ್ಲವೆಂದು ಆಕ್ಷೇಪಣೆ ಮಾಡಿರುತ್ತಾರೆ.

....02

**ನಿರ್ಣಯ:** ಡಿ.ಜಿ.ಎಂ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಗೆ ಗದಗ ಇಲ್ಲಿಗೆ ಪರಿಶಿಷ್ಟ ಜಾತಿ ಬೋಧಕ ವೃಂದದ ಹುದ್ದೆ 01 ಮತ್ತು ಪರಿಶಿಷ್ಟ ಪಂಗಡದ ಭೋಧಕ ವೃಂದದ 02 ಹುದ್ದೆಗಳು ಒಟ್ಟು 03 ಬ್ಯಾಕ್‌ಲಾಗ್ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಪಡೆಯಲು ಹೊರಡಿಸಲಾದ ನೇಮಕಾತಿ ಅಧಿಸೂಚನೆಯಲ್ಲಿ The Karnataka SCs, STs and OBC's (Reservation of Appointments etc.) Act 1990 ಮತ್ತು The Karnataka State Civil Services (Unfilled Vacancies Reserved for Persons Belonging to the SCs and STs (Special Recruitment) Rules 2001 ನಿಯಮಗಳು ಅನ್ವಯವಾಗುತ್ತದೆ ಎಂದು ನಮೂದಿಸಿರುವುದಿಲ್ಲ. ಆದರೇ ಸದರಿ ನೇಮಕಾತಿ ಅಧಿಸೂಚನೆಯಲ್ಲಿ **ಬ್ಯಾಕಲಾಗ್ ಹುದ್ದೆಗಳ ವಿಶೇಷ ನೇಮಕಾತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ** ಎಂದು ನಮೂದಿಸಲಾಗಿರುತ್ತದೆ ಆದುದರಿಂದ ಸದರಿ ಅಂಶವನ್ನು ನೇಮಕಾತಿ ಪ್ರಾಧಿಕಾರದ ಗಮನಕ್ಕೆ ತರಲು ನಿರ್ಣಯಿಸಲಾಯಿತು.

**ನ್ಯೂನ್ಯತೆ ಸಂಖ್ಯೆ: 02**- ಈ ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿ ಸಂಬಂಧ ದಿನಾಂಕ:24.02.2025 ರಂದು ನಡೆಸಿರುವ ನೇಮಕಾತಿ ಸಮಿತಿ ನಡವಳಿಯಲ್ಲಿ ಅಭ್ಯರ್ಥಿಗಳ ಆಯ್ಕೆಗೆ "ಗ್ರೇಡಿಂಗ್ ಅಂಕಗಳ ಪಟ್ಟಿ" ಸಲ್ಲಿಸಿದ ಅಭ್ಯರ್ಥಿಗಳನ್ನು ಪರಿಗಣಿಸದಿರಲು ಹಾಗೂ ಅವರನ್ನು ನೇಮಕಾತಿ ಪ್ರಕ್ರಿಯೆಯಿಂದ ಕೈಬಿಡಲು ನಿರ್ಧರಿಸಿ. ಅಂಕಪಟ್ಟಿ ಹೊಂದಿರುವ ಅಭ್ಯರ್ಥಿಗಳನ್ನು ಮಾತ್ರ ಆಯ್ಕೆ ಮಾಡಲು ನಿರ್ಧರಿಸಲಾಗಿದೆ. ಇದರಿಂದಾಗಿ "ಗ್ರೇಡಿಂಗ್ ಅಂಕಗಳ ಪಟ್ಟಿ" ಸಲ್ಲಿಸಿದ ಅಭ್ಯರ್ಥಿಗಳಿಗೆ ಈ ನೇಮಕಾತಿಯಲ್ಲಿ ಅವಕಾಶ ದೊರೆತಿರುವುದಿಲ್ಲವೆಂಬ ಅಂಶವನ್ನು ಮಾನ್ಯ ಆಯುಕ್ತರು ಆಯುಷ್ ಇಲಾಖೆ ಬೆಂಗಳೂರು ರವರು ಈ ಮೇಲಿನಂತೆ ಆಕ್ಷೇಪಣೆ ಮಾಡಿರುತ್ತಾರೆ.

ಈ ನೇಮಕಾತಿಯು ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿಯಾಗಿದ್ದು, ಈ ನೇಮಕಾತಿಯಲ್ಲಿ ''ಆಯ್ಕೆ ವಿಧಾನ'' ವನ್ನು ಜಾಹಿರಾತಿನಲ್ಲಿ ಅಥವಾ ಅಧಿಸೂಚನೆಯಲ್ಲಿ ತಿಳಿಸಿಲ್ಲ. "ಆಯ್ಕೆ ವಿಧಾನ" The Karnataka State Civil Services (Unfilled Vacancies Reserved for Persons Belonging to the SCs and STs (Special Recruitment) Rules 2001 ರ ನಿಯಮಗಳ ಪ್ರಕಾರ ಮಾಡಬೇಕಾಗಿರುತ್ತದೆ. ಆದರೆ, ಸಮಿತಿಯು ತಾತ್ಕಾಲಿಕ ಆಯ್ಕೆಪಟ್ಟಿಗೆ ಅನುಮೋದನೆಗೆ ತನ್ನದೇ ಆದ ವಿಧಾನವನ್ನು ಅನುಸರಿಸಿದೆ ಮತ್ತು ಗ್ರೇಡಿಂಗ್ ಅಂಕಗಳ ಪಟ್ಟಿಯನ್ನು ಸಲ್ಲಿಸಿದ ಅಭ್ಯರ್ಥಿಗಳನ್ನು ಹೊರತುಪಡಿಸಿ ಅಂಕಪಟ್ಟಿ, ಹೊಂದಿರುವ ಅಭ್ಯರ್ಥಿಗಳು ಸಲ್ಲಿಸಿದ ಅವರು ಹೊಂದಿರುವ ಅಂಕಗಳನ್ನು ಆಧರಿಸಿ ತಾತ್ಕಾಲಿಕ ಪಟ್ಟಿಯನ್ನು ಸಿದ್ಧಪಡಿಸಿ ಅನುಮೋದನೆಗೆ ಸಲ್ಲಿಸಿದೆ. ಆದರೆ ನಿಯಮಗಳನ್ವಯ ಈ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪರಿಗಣಿಸಲು ಅವಕಾಶವಿರುವುದಿಲ್ಲ ಆಕ್ಷೇಪಣೆ ಮಾಡಿರುತ್ತಾರೆ.

**ಅದರನ್ವಯ ದಿನಾಂಕ:26-11-2025ರಂದು ಬ್ಯಾಕಲಾಗ್ ನೇಮಕಾತಿ ಸಮಿತಿ ಸಭೆಯಲ್ಲಿನ ನಿರ್ಣಯ:** ಡಿ.ಜಿ.ಎಂ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಗದಗ ಇಲ್ಲಿಗೆ 03 ಬ್ಯಾಕ್‌ಲಾಗ್ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಪಡೆಯಲು ದಿನಾಂಕ:24-02-2025ರಂದು ನಡೆಸಿರುವ ಸಭೆಯಲ್ಲಿ ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ದಿಂದ Notional ಅಂಕಪಟ್ಟಿ ಸಲ್ಲಿಸದೇ ಗ್ರೆಡಿಯಷನಲ್ ಫಲಿತಾಂಶ ಪ್ರತಿಗಳನ್ನು ಸಲ್ಲಿಸಿರುತ್ತಾರೆ ಹಾಗೂ ಮೂರು ಅಭ್ಯರ್ಥಿಗಳು ಯಾವದೇ ದಾಖಲಾತಿಗಳನ್ನು ಸಲ್ಲಿಸಿರುವದಿಲ್ಲ. ಜೊತೆಗೆ ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದವರು ಯಾವುದೇ ತರಹದ ಅಂಕಪಟ್ಟಿಯನ್ನು ತಮಗೆ

ನೀಡಲಾಗುವದಿಲ್ಲವೆಂದು ತಿಳಿಸಿರುವುದರಿಂದ ಸದರಿ Notional ಅಂಕಪಟ್ಟಿ ಸಲ್ಲಿಸಿದ ಅಭ್ಯರ್ಥಿಗಳನ್ನು ನೇಮಕಾತಿ ಪ್ರಕ್ರಿಯೇಯಿಂದ ಕೈಬಿಡಲು ತಿರ್ಮಾನಿಸಲಾಗಿರುತ್ತದೆ. ಆದರೇ ಸದರಿ ಗ್ರೇಡಿಂಗ ಅಂಕಪಟ್ಟಿ ಸಲ್ಲಿಸಿದ ಅಭ್ಯರ್ಥಿಗಳನ್ನು ನೇಮಕಾತಿ ಪ್ರಕ್ರಿಯೆಯಿಂದ ಕೈಬಿಡುವುದು ನ್ಯಾಯಸಮತವಾಗಿಲ್ಲದೇ ಇರುವುದರಿಂದ ಸದರಿ ಅಭ್ಯರ್ಥಿಗಳ ಬಿ.ಎ.ಎಂ.ಎಸ್ ಪ್ರಥಮ ವರ್ಷದಿಂದ ಅಂತಿಮ ವರ್ಷದವರೆಗೆ ಪಡೆದಿರುವ ಅಂಕಗಳನ್ನು ಒಟ್ಟುಗೂಡಿಸಿ ಹಾಗೂ The Karnataka SCS, STs and OBC's (Reservation of Appointments etc.) Act 1990 ಮತ್ತು The Karnataka State Civil Services (Unfilled Vacancies Reserved for Persons Belonging to the SCs and STS (Special Recruitment) Rules 2001 ನಿಯಮಗಳಲ್ಲಿ **ವಯೋಮಿತಿಗೆ ಸಂಬಂಧಿಸಿದ** ನಿಬಂಧನೆಯನ್ವಯ ಆಯ್ಕೆ ಪಟ್ಟಿಯನ್ನು ತಯಾರಿಸಲು ನಿರ್ಣಯಿಸಲಾಯಿತು.

ಕರ್ನಾಟಕ ರಾಜ್ಯ ಪತ್ರ ಬ್ಯಾಕ್ ಲಾಗ್ ಹುದ್ದೆಗೆ ನೇಮಕಾತಿ ಮಾಡಿಕೊಳ್ಳುವ ಸಂದರ್ಭದಲ್ಲಿ ರಾಜ್ಯ ಪತ್ರ ಸಂಖ್ಯೆ: DPAR/13/SBC/2001 ಬೆಂಗಳೂರು ದಿನಾಂಕ:21-11-2001 ನಿಯಮ 6ರಲ್ಲಿ ಸೂಚಿಸಿರುವ ಪ್ರಕಾರ ತಾತ್ಕಾಲಿವಾಗಿ ಆಯ್ಕೆ ಮಾಡಲಾಗಿದೆ.

ಪ್ರಕಟಣೆಯ ಅಧಿಸೂಚನೆಯ ಪ್ರಮುಖ ಸೂಚನೆಗಳಲ್ಲಿ ಕ್ರಮ ಸಂಖ್ಯೆ 02 ಮತ್ತು 03ರಲ್ಲಿ ಅರ್ಹ ಅಭ್ಯರ್ಥಿಗಳ ಅರ್ಹತಾ ಪರೀಕ್ಷೆಯಲ್ಲಿ ಒಟ್ಟು ಅಂಕಗಳನ್ನು ಸಮನಾಗಿ ಶೇಕಡಾ ಅಂಕ ಪಡೆದಿದ್ದರೆ ಅಂತಹ ಅಭ್ಯರ್ಥಿಗಳ ಸಂದರ್ಭದಲ್ಲಿ ಅರ್ಹತಾ ಆಧಾರದ ಮೇಲೆ ಹಾಗೂ ಅತೀ ಹೆಚ್ಚು ಅಂಕ ಪಡೆದ ಹಾಗೂ ವಯಸ್ಸಿನಲ್ಲಿ ಹಿರಿಯರಾಗಿರುವ ಅಭ್ಯರ್ಥಿಯ ಅರ್ಹತಾ ಕ್ರಮದ ಮೇಲೆ ಆಯ್ಕೆ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ನ್ಯೂನ್ಯತೆ ಸಂಖ್ಯೆ: 03**- ಈ ಬ್ಯಾಕ್‌ಲಾಗ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ವಿವರ. ಅವರ ವಯಸ್ಸಿನ ಬಗ್ಗೆ ಹಾಗೂ ಈ ನೇಮಕಾತಿಯಲ್ಲಿ 18 ರಿಂದ 29 ವರ್ಷ ಮತ್ತು 29-40 ವರ್ಷ ವಯಸ್ಸಿನ ವ್ಯಾಪ್ತಿಯಲ್ಲಿ ಯಾವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿರುತ್ತಾರೆ ಎಂಬುದರ ಬಗ್ಗೆ ಯಾವುದೇ ಸ್ಪಷ್ಟತೆ ಇರುವುದಿಲ್ಲ The Karnataka State Civil Services (Unfilled Vacancies Reserved for Persons Belonging to the SCs and STs (Special Recruitment) Rules 2001 ರ ನಿಯಮಗಳು ಬ್ಯಾಕ್‌ಲಾಗ್ ನೇಮಕದಲ್ಲಿ ಅರ್ಹ ಅಭ್ಯರ್ಥಿಗಳಿಗಿಂತ ಹೆಚ್ಚಾಗಿ 29-40 ವರ್ಷ ವಯಸ್ಸಿನ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗಿರುತ್ತದೆ. ಆದರೆ ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸುವಾಗ ಅವರಿಗೆ ಆದ್ಯತೆಯನ್ನು ನೀಡಿರುವುದನ್ನು ಸ್ಪಷ್ಟಪಡಿಸಿರುವುದಿಲ್ಲವೆಂದು ಆಕ್ಷೇಪಣೆ ಮಾಡಿರುತ್ತಾರೆ.

**ನಿರ್ಣಯ:** ನೇಮಕಾತಿ ಅಧಿಸೂಚನೆಯ ಪ್ರಮುಖ ಸೂಚನೆಗಳಲ್ಲಿ The Karnataka State Civil Services (Unfilled Vacancies Reserved for Persons Belonging to the SCs and STs (Special Recruitment) Rules 2001 ರ ನಿಯಮ ಮತ್ತು ಚಾಲ್ತಿ ನಿಯಮಗಳನ್ವಯ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ ಕನಿಷ್ಟ ವಯೋಮಿತಿ 18 ವರ್ಷ ಪೂರೈಸಿರಬೇಕು ಹಾಗೂ ಗರಿಷ್ಟ ವಯೋಮಿತಿ 40 ವರ್ಷ ಮೀರಬಾರದು ಎಂದು ಸ್ಪಷ್ಟವಾಗಿ ನಮೂದಿಸಲಾಗಿರುತ್ತದೆ ಮತ್ತು ಯಾವುದೇ ವಯಸ್ಸಿನವರಿಗೆ ಆದ್ಯತೆ ನೀಡಲಾಗುವುದು ಎಂದು ನಮೂದಿಸಿರುವುದಿಲ್ಲ. ಈ ಸಂಬಂಧ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಸದರಿ ವಿಷಯವನ್ನು ಸ್ಪಷ್ಟ ಪಡಿಸಿರುವುದಿಲ್ಲ ಹಾಗೂ ಈಗಾಗಲೇ ತಯಾರಿಸಿದ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಆಯುಷ್ ನಿರ್ದೇಶನಾಲಯದ ಪತ್ರದ ಸಂಖ್ಯೆ::AYUSH/16/EST5/2020-ESTS

. . . . 04

ದಿನಾಂಕ:28-10-2025ರ ಪತ್ರದಲ್ಲಿ ರದ್ದು ಪಡೆಸಿರುವುದರಿಂದ ಮುಂದೆ ತಯಾರಿಸುವ ಆಯ್ಕೆ ಪಟ್ಟಿಯಲ್ಲಿ ಸದರಿ ವಿಷಯವನ್ನು ಗಮನದಲ್ಲಿರಿಸಿಕೊಂಡು ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ತಯಾರಿಸಲು ನಿರ್ಣಯಿಸಲಾಯಿತು.

**ರಸಶಾಸ್ತ್ರ ಮತ್ತು ಭೈಷಜ್ಯ ಕಲ್ಪನ ವಿಷಯದಲ್ಲಿ** : 18 ರಿಂದ 29 ವರ್ಷದೊಳಗಿನ ಸ್ವೀಕೃತವಾದ ಅರ್ಜಿಗಳ ಸಂಖ್ಯೆ: 04 ಮತ್ತು ಇವುಗಳಲ್ಲಿ 30 ರಿಂದ 40 ವರ್ಷದೊಳಗಿನ ಸ್ವೀಕೃತವಾದ ಅರ್ಜಿಗಳ ಸಂಖ್ಯೆ: 15 ಇವುಗಳಲ್ಲಿ ಅತೀ ಹೆಚ್ಚು ವಯಸ್ಸಿನ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ.

**ಅಗದತಂತ್ರ ವಿಷಯದಲ್ಲಿ** : 18 ರಿಂದ 29 ವರ್ಷದೊಳಗಿನ ಸ್ವೀಕೃತವಾದ ಅರ್ಜಿಗಳ ಸಂಖ್ಯೆ: 02 ಮತ್ತು ಇವುಗಳಲ್ಲಿ 30 ರಿಂದ 40 ವರ್ಷದೊಳಗಿನ ಸ್ವೀಕೃತವಾದ ಅರ್ಜಿಗಳ ಸಂಖ್ಯೆ: 03 ಇವುಗಳಲ್ಲಿ ಅತೀ ಹೆಚ್ಚು ವಯಸ್ಸಿನ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ.

## ತೀರ್ಮಾನ

ಆಯುಷ್ ನಿರ್ದೇಶನಾಲಯದ ಪತ್ರದ ಸಂಖ್ಯೆ: AYUSH/16/EST5/2020-ESTS ದಿನಾಂಕ:28-10-2025ರ ಪತ್ರದಲ್ಲಿ ತಿಳಿಸಿದ ಎಲ್ಲಾ ನ್ಯೂನ್ಯತೆಗಳಿಗೆ ಈ ಮೇಲಿನಂತೆ ಚರ್ಚಿಸಿದ ವಿಷಯಗಳನ್ನು ಕುಲಕುಂಶವಾಗಿ ಚರ್ಚಿಸಿ ನಿರ್ಣಯಿಸಿ ನ್ಯೂನ್ಯೆತೆಗಳನ್ನು ಗಮನದಲ್ಲಿಟ್ಟುಕೊಂಡು ಅನುಬಂಧ-1ರಲ್ಲಿರುವಂತೆ ಸಮಿತಿಯ ಸರ್ವಾನುಮತದಿಂದ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ತಯಾರಿಸಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಮಹಾವಿದ್ಯಾಲಯದ ನೋಟಿಸ್ ಬೋರ್ಡ, ಕಾಲೇಜಿನ ವೈಬ್ ಸೈಟ್, ರಾಜ್ಯ ಪತ್ರಿಕೆಗಳಲ್ಲಿ ಮತ್ತು ಆಯುಷ್ ನಿರ್ದೇಶನಾಲಯ ಬೆಂಗಳೂರು ಇವರ ವೈಬ್ ಸೈಟ್ ಹಾಗೂ ನೋಟಿಸ್ ಬೋರ್ಡಗಳಲ್ಲಿ ಪ್ರಕಟಿಸಿದ ದಿನಾಂಕದಿಂದ 30 ದಿನದೊಳಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಮತ್ತು ಕೊನೆಯ ದಿನಾಂಕದ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಲು ಅವಕಾಶವಿರುವುದಿಲ್ಲವೆಂದು ಸ್ಪಷ್ಟವಾಗಿ ನಮೂದಿಸಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಹೊರಡಿಸಲು ಬ್ಯಾಕಲಾಗ್ ನೇಮಕಾತಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಯಿತು.

ಮುಂದುವರೆದು ಆಯುಷ್ ನಿರ್ದೇಶನಾಲಯದ ಪತ್ರದ ಸಂಖ್ಯೆ::AYUSH/16/EST5/2020-ESTS ದಿನಾಂಕ:28-10-2025ರ ಪತ್ರದಲ್ಲಿ ತಿಳಿಸಿರುವಂತೆ ಬಾಕಿ ಉಳಿದಿರುವ ಎಸ್.ಟಿ 01 ಬ್ಯಾಕ್‌ಲಾಗ್ ಹುದ್ದೆಯಾದ ಕೌಮಾರಭೃತ್ಯ ವಿಷಯಕ್ಕೆ ಸಂಬಂಧಿಸಿದಂತೆ ಮತ್ತೊಮ್ಮೆ ಅಧಿಸೂಚನೆಯನ್ನು The Karnataka State Civil Services (Unfilled Vacancies Reserved for Persons Belonging to the SCs and STs (Special Recruitment) Rules 2001 ರ ನಿಯಮ ಮತ್ತು ಚಾಲ್ತಿ ನಿಯಮಗಳನ್ವಯ ಹೊರಡಿಸಲು ತೀರ್ಮಾನಿಸಲಾಯಿತು.

| ಕ್ರ ಸಂ | ಅಧಿಕಾರಿ/ಸಿಬ್ಬಂದಿಗಳ ಹೆಸರು | ಪದನಾಮ | ಸಹಿ |
|---|---|---|---|
| 01 | ಪರಮಪೂಜ್ಯ ಜಗದ್ಗುರು ಶ್ರೀ. ಅಭಿನವ ಶಿವಾನಂದ ಮಹಾಸ್ವಾಮಿಗಳು, ಶ್ರೀ ಶಿವಾನಂದ ಬೃಹನ್ಮಠ, ಗದಗ. | ಅಧ್ಯಕ್ಷರು | Shivanand Swamy |

| | | | |
|---|---|---|---|
| 02 | ಉಪನಿರ್ದೇಶಕರು,<br>ಸಮಾಜ ಕಲ್ಯಾಣಾಧಿಕಾರಿಗಳು, ಗದಗ | ಸದಸ್ಯರು | |
| 03 | ಶ್ರೀ. ಬಿ.ಎಸ್.ಪಾಟೀಲ,<br>ಆಡಳಿತ ಮಂಡಳಿ ಕಾರ್ಯದರ್ಶಿಗಳು | ಸದಸ್ಯರು | |
| 04 | ಡಾ. ಎಸ್.ಎನ್.ಬೆಳವಡಿ | ಸದಸ್ಯ ಕಾರ್ಯದರ್ಶಿಗಳು | |
| 05 | ಡಾ. ಎಂ.ವಿ.ಸೊಬಗಿನ | ಸದಸ್ಯರು (ವಿಷಯ ತಜ್ಞರು) | |
| 06 | ಡಾ. ಜೆ.ಎಸ್.ಮೆಣಸಗಿ | ಸದಸ್ಯರು (ವಿಷಯ ತಜ್ಞರು) | |